ಅಷ್ಟಾಗಿ ತಟ್ಟಲಿಲ್ಲ. 'ನೀನು ಬ್ರೆಕ್‌ಫಾಸ್ಟ್ ಮುಗಿಸು. ಫ್ಲೈಟ್ ಟಿಕೆಟ್ ನೋಡಬೇಕಲ್ಲ ಇವತ್ತು' ಎಂದ ನೀಲ್. ಅವನು ಫ್ಲೈಟ್ ಟಿಕೆಟ್ ಎಂದದ್ದೇ ಜ್ಯೋತ್ಸ್ನಾ ಸ್ವಲ್ಪ ಗೆಲುವಾದಳು.

ಒಂದೆರಡು ತಿಂಗಳಿನಿಂದ 'ಜೋಹ್, ಇಂಡಿಯಾಗೆ ಹೋಗಿ ಬರೋಣ' ಎಂದು ನೀಲ್ ಹೇಳುತ್ತಿದ್ದರೂ ಅವನಿಗೆ ಆ ಬಗ್ಗೆ ಆಸಕ್ತಿಯಿಲ್ಲ ಎಂದುಕೊಂಡಿದ್ದಳು. ಈಗ, ತಾನು ಅದ್ಯಾವುದೋ ಭ್ರಾಮಕ ಸ್ಥಿತಿಯಲ್ಲಿರುವಾಗ ಇಣುಕಿದ ಫ್ಲೈಟ್ ಟಿಕೆಟ್ಟಿನ ವಿಷಯ ಹಣೆಯಿಂದ ಪಾದವರೆಗೂ ಅವಳನ್ನು ಆವರಿಸಿದ ಭ್ರಮೆಯ ಚೀಲವನ್ನು ಬಗೆದುಹಾಕಿತು.

'ಇಂಥ ಅಬ್ಬಿತಬ್ಬಿದಾಟವ ಎಲ್ಲಿ ಕಲಿತ್ಯೋ ಕೃಷ್ಣ ರುಗುವಿಣಿ ಸಹಿತ ಹಸೆsಗ್ಯೋಳು' ಎಂದು ಅವಳು ರಾಗವಾಗಿ ಹಾಡಿ ಹಿಮ್ಮಡಿಯನ್ನು ಪೂರ್ತಿ ಎತ್ತರಿಸಿ ನೀಲ್‌ನ ಕೆಂಪು ಕಿವಿಗಳನ್ನು ಉಗುರಿನಿಂದ ಸವರಿದಳು. ಹಾಡಿನ ಸಾಲುಗಳು ಅರ್ಥವಾಗದಿದ್ದರೂ ಜ್ಯೋತ್ಸ್ನಾಳ ನೇವರಿಕೆಯ ಹಿತವನ್ನು ಅನುಭವಿಸಿದ ನೀಲ್ 'ಕಮಾನ್ ದೆನ್' ಎಂದು ಡೈನಿಂಗ್ ಟೇಬಲ್ಲಿನ ಮೇಲೆ ಹೊಟ್ಟೆಗಿಲ್ಲದೆ ನಿಶ್ಶಕ್ತವಾದ ಲ್ಯಾಪ್‌ಟಾಪಿಗೆ ಚಾರ್ಜಿಂಗ್ ಕೇಬಲ್ ಚುಚ್ಚಿದ.

ಚಿಕ್ಕಪ್ಪನ ಮಗಳ ಮದುವೆಯ ಸಮಯಕ್ಕೇ ಊರಿಗೆ ಹೋಗಿದ್ದರೆ... ಎಂಬ ಪ್ರಶ್ನೆ ಸುಳಿಯಿತಾದರೂ ತಕ್ಷಣ ತಲೆ ಧಿಂ ಅಂತು. ಅಲ್ಲಿನ ನೂರಾರು ಪ್ರಶ್ನೆಗಳು, ಹುಸಿ ನ್ಯಾಯಾಧೀಶರ ನಿರ್ಣಯಗಳು, ಹುಟ್ಟುವ ಉಪಕತೆಗಳು ಇವ್ಯಾವುದಕ್ಕೂ ಅವಳು ತಯಾರಿರಲಿಲ್ಲ. ನೀಲ್‌ಗಂತೂ ಇಬ್ಬರ ಸಂಬಂಧ ಶುರುವಾದಾಗಿನಿಂದ ಅವನೇ ಭಾವಿಸುವಂತೆ ಇವೆಲ್ಲವೂ 'ಪ್ಯಾರಡೈಮ್ ಶಿಫ್ಟ್'.

ಜ್ಯೋತ್ಸ್ನಾಳ ಪರಿವಾರವೇ ಹೇಳುವ ಪ್ರಕಾರ ಅವಳ ಇವತ್ತಿನ ಸ್ಥಿತಿಗೆ ಅವಳು ಸಲ್ಲುವವಳೇ ಅಲ್ಲ. ಎಲ್ಲೋ

